Losses due to Rains in Madhugiri

ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ).—ಸ್ವಾಮಿ ಮೊನ್ನೆ ಮಂಳೆಗಾಲದಲ್ಲಿ ಆ ಮಧುಗಿರಿ ಮತ್ತು ಅದರ ಸುತ್ತಮುತ್ತಲಿರತಕ್ಕ ಗ್ರಾಮಗಳ ಜನರು ಅಧಿಕವಾದ ಮಳೆಯಿಂದ ತಮ್ಮ ಆಸ್ತಿ ಮನೆ ಮಠಗಳನ್ನೆಲ್ಲಾ ಕಳೆದುಕೊಂಡಿದ್ದ ವಿಷಯವನ್ನು ಸರ್ಕಾರದವರು ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿ ನೊಂದ ಸಂತ್ರಸ್ತರಿಗೆ ಪರಿಹಾರ ನೀಡಲು ಆ ತಾಲ್ಲೂಕಿಗೆ ಹಣವನ್ನು ಕಳುಹಿಸಿದ್ದರೆ ಅಲ್ಲಿನ ಬಿ.ಡಿ.ಓ. ಮತ್ತು ಇತರೇ ಅಧಿಕಾರಿಗಳು ಒಂದಾಗಿ ಯಾರು ತಮಗೆ ದುಡ್ಡು ಕೊಡುತ್ತಾರೋ ಆಥವಾ ಲಂಚ ಕೊಡುತ್ತಾರೋ ಅಂಥವರಿಗೆ ಮಾತ್ರ ಪರಿಹಾರವನ್ನು ಕೊಟ್ಟು ಯಾರು ನಿಜವಾಗಿಯೂ ಕಷ್ಟಕ್ಕೆ ಸಿಕ್ಕಿ ಆಸ್ತಿಪಾಸ್ತಿಗಳನ್ನು ಹಾಳುಮಾಡಿಕೊಂಡಿದ್ದಾರೋ ಅಂಥವರಿಗೇನೂ ಪ್ರಯೋಜನ ಸಿಕ್ಕಿಲ್ಲ. ಯಾರಿಗೆ ಆ ಹಣ ಸೇರಬಾರದಿತ್ತೋ ಅಂಥವರಿಗೆ ಹಣ ಈ ದಿವಸ ಸೇರುತ್ತಿದೆ. ಈ ವಿಚಾರದಲ್ಲಿ ಜನರು ಮಾನ್ಯ ರೆವಿನ್ಯೂ ಮಂತ್ರಿಗಳಿಗೂ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೂ ರಾಜ್ಯದ ಚೀಫ್ ಸೆಕ್ರೆಟರಿಗಳಿಗೂ ಅರ್ಜಿಗಳನ್ನು ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ಅಲ್ಲಿನ ನೊಂದ ಜನರು ನನಗೂ ಕೂಡ ಈ ದಿವಸ ಒಂದು ಪತ್ರವನ್ನು ಬರೆದಿದ್ದಾರೆ. ಅಲ್ಲಿ ಬಹಳ ಅನ್ಯಾಯಗಳು ನಡೆಯಂತ್ತಿವೆ. ಅದನ್ನು ಕೂಡಲೆ ಸರ್ಕಾರದವರು ತಡೆಗಟ್ಟಬೇಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಪಹಣೀ ವಿಚಾರದಲ್ಲಿ ಒಂದು ಗಹನವಾದ ವಿಷಯವನ್ನು ನಾನು ಈ ಸಭೆಯ ಗಮನಕ್ಕೆ ತರಬೇಕಾಗಿದೆ. ಪಹಣೀ ವಿಚಾರದಲ್ಲಿ ತಕರಾರುಗಳು ಬಂದಾಗ ಸ್ಥಳೀಯ ಅಧಿಕಾರಿಗಳ ಆ ತಕರಾರು ಇರತಕ್ಕ ಜಾಗಗಳಿಗೆ ಹೋಗತಕ್ಕ ಸಂದರ್ಭದಲ್ಲಿ ಈ ಅಧಿಕಾರಿಗಳು ನೇರವಾಗಿ ಜಮೀನ್ದಾರರ ಮನೆಗೆ ಹೋಗಿ ಅಲ್ಲಿ 'ಚಹಾ' ಕುಡಿದು ಒಂದು ಆ ಕೇಸುಗಳನ್ನು ಅವರ ಪರವಾಗೇ ತೀರ್ಮಾನ ಕೊಡುತ್ತಿದ್ದಾರೆ. ಅಕ್ರಮ ಪಹಣಿ ದೂರುಗಳನ್ನು ಕೊಟ್ಟರೆ ಇದೇ ನ್ಯಾಯ ಜನರಿಗೆ ಸಿಕ್ಕುವುದು ? ಹೀಗೆ ಅಧಿಕಾರಿಗಳು ದುರ್ವರ್ತನೆಯಿಂದ ವರ್ತಿಸುತ್ತಿರುವುದರ ಬಗ್ಗೆ ಕೂಡಲೇ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

SRI V. N. PATIL.—As per the list of business it is put down for today discussion on private members' resolution. We are informed that one important legislative Bill, namely, the Land Reforms Bill will be introduced today. Even though it is not so far formally introduced, the papers have been sent to us and it is most disappointing thing. I request the Hon. Minister not to introduce it and to kindly ponder over the matter and introduce the same on the 14th. It is sincere request I am making. I request him to kindly bring in a still more effective legislation.

MR. DEPUTY SPEAKER.—The Hon. Member will please take his seat. I never wanted such a kind of narration.

Draught conditions in Anekal Taluk

ಶ್ರೀ ಎಂ. ಬಿ. ರಾಮಸ್ವಾಮಿ (ಆನೇಕಲ್).—ಅಧ್ಯಕ್ಷರೇ, ನಾನು ಒಂದು ಕಾಲಟೆನ್‌ಷನ್ ನೋಟೀಷನ್ನು ತಮ್ಮ ಕಡೆಗೆ ಕಳುಹಿಸಿದ್ದೆ. ಆನೆಕಲ್ ತಾಲ್ಲೂಕಿನಲ್ಲಿ ಮಳೆ ಇಲ್ಲ ಬೆಳೆ ಇಲ್ಲ. ಜನರಿಗೆ ತಿನ್ನುವುದಕ್ಕೆ ಅನ್ನ ಆಹಾರಗಳಿಲ್ಲ. ದನಕರುಗಳಿಗೆ ತಿನ್ನುವುದಕ್ಕೆ ಮೇವಿಲ್ಲ—ಕುಡಿಯುವುದಕ್ಕೆ ಕೆರೆ ಕಟ್ಟೆಗಳಲ್ಲಿ ನೀರಿಲ್ಲ ಈ ವಿಚಾರದಲ್ಲಿ ನೋಟೀಸನ್ನು ಕಳುಹಿಸಿ ಒಂದು ವಾರದ ಮೇಲಾಗಿದೆ. ಅಲ್ಲಿಯ ಜನರು ಬಹಳ ಕಷ್ಟದಲ್ಲಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ರೆವಿನ್ಯೂ ಮಂತ್ರಿಗಳಿಗೂ ಈ ವಿಚಾರದಲ್ಲಿ ಕಾಗದ ಬರೆದಿದ್ದೇನೆ. ನನಗೆ ಯಾವ ಉತ್ತರವೂ ಇಲ್ಲಿಯವರೆಗೆ ಬರಲಿಲ್ಲ. ಅಲ್ಲಿಗೆ ಸರ್ಕಾರದವರು ಕೂಡಲೇ ಆಹಾರ ಧಾನ್ಯಗಳನ್ನೂ ಮತ್ತು ಜಾನುವಾರುಗಳಿಗೆ ಹುಲ್ಲನ್ನೂ ಒದಗಿಸ ಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

MR. DEPUTY SPEAKER.—I request the Minister to pay due attention to the grievances raised by the Hon. Members and that of Sri Ramaswamy in particular. Next item.